KARN220028402022

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.

ಉಪಸ್ಥಿತರು: ಶ್ರೀ ಮಹೇಂದ್ರ ಎಂ., ಬಿ.ಎ ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**ದಿನಾಂಕಃ 15 ನೇ ಫೆಬ್ರವರಿ -2024**

**ಓ.ಎಸ್.ನಂ.181/2023**

ವಾದಿಗಳು ಃ ಶ್ರೀಮತಿ.ಭೋರಮ್ಮ ಮತ್ತು ಇತರರು

-ವಿರುದ್ಧ-

ಪ್ರತಿವಾದಿಗಳು ಃ ಶ್ರೀ.ಕೆ. ನಾಗರಾಜು ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ: IV**

ವಾದಿಗಳು/ಅರ್ಜಿದಾರರು: 1. ಶ್ರೀಮತಿ.ಭೋರಮ್ಮ
ಕೋಂ ಲೇಟ್ ದೊಡ್ಡಯ್ಯ
ವಯಸ್ಸು 70 ವರ್ಷ,

ವಾಸಃ ಮಂಗಳವಾರ ಪೇಟೆ,
13 ನೇ ಅಡ್ಡ ರಸ್ತೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

2. ಶ್ರೀಮತಿ ಮಂಗಳಮ್ಮ
ಕೋಂ ಲೇಟ್ ರೇವಣ್ಣ.ಎ
ಬಿನ್ ಶ್ರೀಮತಿ ಭೋರಮ್ಮ
ಮತ್ತು ಲೇಟ್ ದೊಡ್ಡಯ್ಯ
ವಯಸ್ಸು 50 ವರ್ಷ

ವಾಸ ನಂ. 38, KSSC ವಸತಿ ಗೃಹ,
ಮಂಗಳವಾರ ಪೇಟೆ,
13 ನೇ ಅಡ್ಡ ರಸ್ತೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

3. ಶ್ರೀಮತಿ ಕಮಲಮ್ಮ
ಕೋಂ ಲೇಟ್ ಚಿಕ್ಕರಾಮು

KARN220028402022

ಬಿನ್ ಶ್ರೀಮತಿ ಭೋರಮ್ಮ
ಮತ್ತು ಲೇಟ್ ದೊಡ್ಡಯ್ಯ
ವಯಸ್ಸು 47 ವರ್ಷ

ವಾಸಃ ರಂಗಸಮುದ್ರ ಗ್ರಾಮ,
ಟಿ. ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ.ಹೆಚ್.ಡಿ.ಎಸ್,
ವಕೀಲರು)

-ವಿರುದ್ಧ-

ಉದ್ದೇಶಿತ ಪ್ರತಿವಾದಿ/

ಶ್ರೀ. ಆರ್ ಪುನೀತ್
ಬಿನ್ ರೇವಣ್ಣ
ವಯಸ್ಸುಃ 33 ವರ್ಷ,

ವಾಸಃ ಮನೆ ನಂ. 23,
9 ನೇ ಅಡ್ಡ ರಸ್ತೆ,
ಗೆಳೆಯರ ಬಳಗ,
ಜೆ.ಸಿ ನಗರ,
ಬೆಂಗಳೂರು ಉತ್ತರ,
ಬೆಂಗಳೂರು.

(ಪ್ರತಿನಿಧಿಸುವವರು ಶ್ರೀ.ಆರ್.ಡಿ.ಕೆ,
ವಕೀಲರು)

| | | |
|---|---|---|
| I | ಯಾವ ಪ್ರಾವಿಧಾನದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ. | ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ*1* ನಿಯಮ *10(2)* ಮತ್ತು ಸಹವಾಚಕ ಕಲಂ*.151* |
| IV | ಯಾವ ಪರಿಹಾರ ಕೋರಲಾಗಿದೆ. | ಪ್ರತಿವಾದಿಯಾಗಿ ಸೇರ್ಪಡೆ ಮಾಡಲು |
| IVI | ಅರ್ಜಿಯನ್ನು ಸಲ್ಲಿಸಿದ ದಿನಾಂಕ | *21.07.2023* |
| IV | ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ *IV* |
| V | ಅರ್ಜಿಗೆ ತಕರಾರು ಸಲ್ಲಿಸಿದ ದಿನಾಂಕ | *26.10.2023* |
| VI | ಆದೇಶವನ್ನು ಹೊರಡಿಸಿದ ದಿನಾಂಕ | *15.02.2024* |

ಸಹಿ/-
(ಶ್ರೀ.ಮಹೇಂದ್ರ ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್. ಸಿ., ಚನ್ನಪಟ್ಟಣ.

<u>ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ1 ನಿಯಮ *10(2)* ಮತ್ತು ಸಹವಾಚಕ ಕಲಂ*.151* ರಂತೆ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ4 ರ ಮೇಲಿನ ಆದೇಶಃ</u>

ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆIV ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ1 ನಿಯಮ 10(2) ಮತ್ತು ಸಹವಾಚಕ ಕಲಂ.151 ರಂತೆ ಸಲ್ಲಿಸಿ ಉದ್ದೇಶಿತ ಪ್ರತಿವಾದಿಯನ್ನು ಈ ದಾವೆಯಲ್ಲಿ 5 ನೇ ಪ್ರತಿವಾದಿಯನ್ನಾಗಿ ಸೇರ್ಪಡೆಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

2. <u>ವಾದಿಯರ ಮಧ್ಯಂತರ ಅರ್ಜಿಯ ಪ್ರಮಾಣ ಪತ್ರದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.</u>

ವಾದಿಯರು ಪ್ರತಿವಾದಿಗಳ ವಿರುದ್ದ ದಾವಾ ಸ್ವತ್ತುಗಳ ಸಂಬಂಧವಾಗಿ ವಿಭಾಗವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ . ಅದೇ ರೀತಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ದಾವಾ ಸ್ವತ್ತುಗಳನ್ನು ಪರಭಾರೆ ಮಾಡದಂತೆ ನಿರ್ಬಂಧಿಸುವ ಏಕ ಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿರುತ್ತಾರೆ. ಅದರಂತೆ ಈ ನ್ಯಾಯಾಲಯವು ಪ್ರತಿವಾದಿಗಳ ವಿರುದ್ಧ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಿರುತ್ತದೆ. ಈ ಅವಧಿಯಲ್ಲಿ 1 ನೇ ಪ್ರತಿವಾದಿಯು ದಾವೆ ಚಾಲ್ತಿಯಲ್ಲಿರುವುದು ಮತ್ತು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವಾಗಿರುವುದು ಗೊತ್ತಿದ್ದರೂ ಸಹ ದಾವಾ 1 ನೇ ಸ್ವತ್ತನ್ನು ಉದ್ದೇಶಿತ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟವು ಕಾನೂನು ಬಾಹಿರವಾಗಿರುತ್ತದೆ. ಆದ್ದರಿಂದ ಸದರಿ ಉದ್ದೇಶಿತ ಪ್ರತಿವಾದಿಯು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಆಗಿರುತ್ತಾರೆ. ಆದ್ದರಿಂದ ಈ ಅರ್ಜಿಯನ್ನು ಸಲ್ಲಿಸಿದ್ದು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

3. ಈ ನ್ಯಾಯಾಲಯವು ಉದ್ದೇಶಿತ ಪ್ರತಿವಾದಿಗೆ ನೋಟೀಸನ್ನು ಜಾರಿ ಮಾಡಲು ಅದೇಶಿಸಿದ್ದು ಅದರಂತೆ ಉದ್ದೇಶಿತ ಪ್ರತಿವಾದಿಗೆ ಮಧ್ಯಾಂತರ ಅರ್ಜಿಯ ನೋಟೀಸು ಜಾರಿಯಾಗಿ ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಉದ್ದೇಶಿತ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂ. 4 ಕ್ಕೆ ತನ್ನ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ವಾದಿಯರು ಸಲ್ಲಿಸಿರುವ ಈ ಅರ್ಜಿಯು ಉರ್ಜಿತವಾಗಿಲ್ಲದೇ ಇರುವುದರಿಂದ ವಜಾ ಗೊಳಿಸಬೇಕೆಂದು ಕೋರಿರುತ್ತಾರೆ. ಉದ್ದೇಶಿತ ಪ್ರತಿವಾದಿಯು

ಮುಂದುವರೆದು ಹೇಳಿರುವುದೇನೆಂದರೆ ವಾದಿಯರು ತಮ್ಮ ಪ್ರಮಾಣ ಪತ್ರದಲ್ಲಿ ಯಾವ ದಾವಾ ಸ್ವತ್ತನ್ನು ಮಾರಾಟ ಮಾಡಲಾಗಿದೆ ಎಂದು ತಿಳಿಸಿರುವುದಿಲ್ಲ. ಏಕಪಕ್ಷೀಯ ತಾತ್ಕಾಲಿಕ ತಡೆಯಾಜ್ಞೆಯಾದ ಬಗ್ಗೆ ಉಪನೋಂದಾಣಾಧಿಕಾರಿಯವರ ಕಛೇರಿಗೆ ಅಥವಾ ಕಂದಾಯ ಅಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಆ ರೀತಿ ತಿಳಿಸಿದ್ದರೆ ನ್ಯಾಯಾಲಯದ ಆದೇಶವು ಉಲ್ಲಂಘನೆ ಆಗುತ್ತಿರಲಿಲ್ಲ. ವಾದಿಯರು ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಉದ್ದೇಶಿತ ಪ್ರತಿವಾದಿಯು ಸ್ವತ್ತಿನ ದಾಖಲೆಗಳನ್ನು ತನ್ನ ವಕೀಲರಿಗೆ ತೋರಿಸಿ ಅವರಿಂದ ಅಭಿಪ್ರಾಯ ಪಡೆದು ಆನಂತರ ಖರೀದಿ ಮಾಡಿದ್ದು ಅವರು ಸದ್ಭಾವನೆಯ ಖರೀದಿದಾರ ಆಗಿರುತ್ತಾರೆ. ವಾದಿಗಳು ನ್ಯಾಯಾಲಯದ ಸಮಯವನ್ನು ವ್ಯಯ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ <u>ಖರ್ಚು ಸಹಿತ ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.</u>

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ:-

<u>ಃಅಂಶಗಳುಃ</u>

1. ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂ. 4 ಪುರಸ್ಕಾರ ಗೊಳ್ಳಲು ಯೋಗ್ಯವಾಗಿದೆಯೇ ಮತ್ತು ಈ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನಮಾಡಲು ಉದ್ದೇಶಿತ ಪ್ರತಿವಾದಿಯ ಹಾಜರು ಅಗತ್ಯತೆ ಇದೇಯೇ?
2. ಮಾಡುವ ಆದೇಶ ಏನು?

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ1 ಃ ನಕಾರಾತ್ಮಕವಾಗಿ

ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ

ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,

## ಕಾರಣಗಳು

8. **ಅಂಶ ಸಂಖ್ಯೆ:1** ವಾದಿಯರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಉದ್ದೇಶಿತ ಪ್ರತಿವಾದಿಯು ದಾವಾ ಸ್ವತ್ತಿನ ಕಾನೂನು ಬಾಹಿರ ಖರೀದಿದಾರ ಆಗಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸದರಿ ಮಧ್ಯಂತರ ಅರ್ಜಿಗೆ ಉದ್ದೇಶಿತ ಪ್ರತಿವಾದಿಯು ತನ್ನ ತಕರಾರನ್ನು ಸಲ್ಲಿಸಿ ತಾನು ಈ ದಾವೆಯ ಅವಶ್ಯಕ ಪಕ್ಷಗಾರ ಅಗಿಲ್ಲದೇ ಇರುವುದರಿಂದ ವಾದಿಯರು ಸಲ್ಲಿಸಿರುವ ಅರ್ಜಿಯು ಊರ್ಜಿತವಾಗಿಲ್ಲದೇ ಇರುವ ಕಾರಣ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತುಗಳ ಸಂಬಂಧವಾಗಿ ವಿಭಾಗವನ್ನು ಕೋರಿ ಮತ್ತು ದಿ:30.01.2016 ರ ವಿಭಾಗ ಪತ್ರವು ಶೂನ್ಯವೆಂದು ಘೋಷಣೆ ಮಾಡಬೇಕೆಂದು ಕೋರಿರುತ್ತಾರೆ. ಸಿವಿಲ್ ಪ್ರಕಿರಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯ ಮೇಲೆ ವಾದ ಮಂಡನೆಗೆ ಇದ್ದ ಅವಧಿಯಲ್ಲಿ ವಾದಿಯರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯರು ಈ ದಾವೆಯನ್ನು ದಿ:22.05.2023 ರಂದು ಸಲ್ಲಿಸಿರುತ್ತಾರೆ. ಅದೇ ದಿನ ಈ ನ್ಯಾಯಾಲಯವು ವಾದಿಯರ ಪರವಾಗಿ ಮತ್ತು ಪ್ರತಿವಾದಿಯರ ವಿರುದ್ಧವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಹೊರಡಿಸಿ ದಾವಾ ಸ್ವತ್ತುಗಳನ್ನು ಪರಭಾರೆ ಮಾಡದಂತೆ ನಿರ್ಬಂಧಿಸುವ ಆದೇಶವನ್ನು ಹೊರಡಿಸಿರುತ್ತದೆ. ವಾದಿಯರು ಈ ಮಧ್ಯಂತರ ಅರ್ಜಿಯ ಜೊತೆಗೆ ಕ್ರಯಪತ್ರದ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದರ ಪ್ರಕಾರ ದಿ:05.06.2023 ರಂದು ಅಂದರೆ ಪ್ರಸ್ತುತ ದಾವೆ ಚಾಲ್ತಿಯಲ್ಲಿ ಇದ್ದ ಅವಧಿಯಲ್ಲಿ 1 ನೇ ಪ್ರತಿವಾದಿಯು ದಾವಾ 1 ನೇ ಸ್ವತ್ತನ್ನು ಉದ್ದೇಶಿತ ಪ್ರತಿವಾದಿಗೆ ಮಾರಾಟ ಮಾಡಿರುವುದು ತಿಳಿದು ಬರುತ್ತದೆ. ತಾನು ಕ್ರಯಪತ್ರದ ಮೂಲಕ ಸ್ವತ್ತನ್ನು ಖರೀದಿ ಮಾಡಿದ ಬಗ್ಗೆ ಉದ್ದೇಶಿತ ಪ್ರತಿವಾದಿಯು ಅಲ್ಲಗಳೆದಿರುವುದಿಲ್ಲ.

12. ದಾವೆ ಚಾಲ್ತಿಯಲ್ಲಿ ಇದ್ದ ಅವಧಿಯಲ್ಲಿ ಉದ್ದೇಶಿತ ಪ್ರತಿವಾದಿಯು ದಾವಾ 1 ನೇ ಸ್ವತ್ತನ್ನು ಖರೀದಿ ಮಾಡಿರುವುದರಿಂದ ಇದು ಸ್ವತ್ತು ವರ್ಗಾವಣೆ ಅಧಿನಿಯಮ ಕಲಂ.52 ರಂತೆ ಅನ್ವಯಿಸುತ್ತದೆ. ಅದ್ದರಿಂದ ಉದ್ದೇಶಿತ ಪ್ರತಿವಾದಿಯು ಈ ದಾವೆಯನ್ನು ತೀರ್ಮಾನಮಾಡಲು ಅವಶ್ಯಕತ ಪಕ್ಷಗಾರ ಆಗಿರುವುದಿಲ್ಲ. ಒಂದು ವೇಳೆ ದಾವೆ ಸಲ್ಲಿಸುವ

ಪೂರ್ವದಲ್ಲಿ ಉದ್ದೇಶಿತ ಪ್ರತಿವಾದಿಯು ದಾವಾ ಸ್ವತ್ತುಗಳನ್ನು ಅಥವಾ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರೆ ಅ ಸಂದರ್ಭದಲ್ಲಿ ಮಾತ್ರ ಉದ್ದೇಶಿತ ಪ್ರತಿವಾದಿಯು ಈ ದಾವೆಗೆ ಅವಶ್ಯಕ ಪಕ್ಷಗಾರ ಅಗುತ್ತಿದ್ದರು. ಈ ಸಂದರ್ಭದಲ್ಲಿ ಉದ್ದೇಶಿತ ಪ್ರತಿವಾದಿಯು ಕೇವಲ ಈ ದಾವೆಯ ಪಲಿತಾಂಶವನ್ನು ಅಥವ ತೀರ್ಪನ್ನು ಮಾತ್ರ ಕಾದುನೋಡಬೇಕಾಗುತ್ತದೆ ಉದ್ದೇಶಿತ ಪ್ರತಿವಾದಿಯ ಅನುಪಸ್ಥಿತಿಯಲ್ಲಿ ಸಹ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡಬಹುದಾಗಿರುತ್ತದೆ. ಅದ್ದರಿಂದ ಉದ್ದೇಶಿತ ಪ್ರತಿವಾದಿಯು ಅವಶ್ಯಕ ಪಕ್ಷಗಾರ ಅಗಿರುವುದಿಲ್ಲ. ವಾದಿಗಳು ಸಲ್ಲಿಸಿರುವ ಈ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು ಅಂಶ ಸಂಖ್ಯೆಃ**1** ಅನ್ನು ನಕಾರಾತ್ಮಕವಾಗಿ ಉತ್ತರಿಸಿದೆ.

14. ಅಂಶ ಸಂಖ್ಯೆಃ**2-** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **-1** ನಿಯಮ **10(2)** ಮತ್ತು ಸಹವಾಚಕ ಕಲಂ**.151** ರಂತೆ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ**4** ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2024** ನೇ ಇಸವಿ ಜನವರಿ **15** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ/-
(ಶ್ರೀ.ಮಹೇಂದ್ರ ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್? ಸಿ., ಚನ್ನಪಟ್ಟಣ.

KARN220028402022

<u>ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ</u>
<u>(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)</u>

**<u>ಆದೇಶ</u>**

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-**1** ನಿಯಮ **10(2)** ಮತ್ತು ಸಹವಾಚಕ ಕಲಂ.**151** ರಂತೆ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:**4** ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್?ಸಿ., ಚನ್ನಪಟ್ಟಣ.